ಆರಿಸೋದು ಮತ್ತು ಸಾವಿತ್ರಿನ ಪಡೆಯೊದು ಈ ಎಲ್ಲಕ್ಕೂ ಒಂದು ಸಂಬಂಧ ಹೆಣೆದು ಕೂತಿದ್ದ ಪಟೇಲಪ್ಪ. ಮುಂದಿನ ಕೆಲ್ಸನ ಆಳು ಕಲ್ಲನಿಗೆ ವಹಿಸಿ ತಾನು ಮಾತ್ರ ಸಾವಿತ್ರಿ ಮೊಲೆ ಹಿಂಡುವ ಕಲ್ಪನೆಯಲ್ಲಿ ಮುಳುಗಿ ಹೋಗಿದ್ದ.

* * *

'ಸಾವಿತ್ರವ್ವಾ, ಹಿಲಾಲು ಹಿಡಿಯೊ ಬಾಬ್ತು ಅಂದ್ರೆ ಸುಮ್ನೆ ಅನ್ಕೊಂಡಿಯೇನು? ಹನ್ಮಪ್ಪನ ಸೇವಾ ಅದು. ಸೇವಾ ಮಾಡಿದ್ರೆ ಅವ್ನು ಯಾವಾಗ್ಲೂ ಕೈ ಹಿಡಿತಾನೆ. ಬಸ್ಯನ ಬಾಳು ಚಲೊ ಇರ್ತೈತಿ. ನೀನಾರ ಒಂಟಿ ಹೆಂಗ್ಸು ಇದಿ. ನಿನ್ ಜೀವನ ಗತಿಯೇನು ಯೋಚ್ನೆ ಮಾಡಿಯೇನ? ಹಿಲಾಲು ಹಿಡಿಯಾಕೆ ನಿಮ್ಮ ಹೊಲೆಗೇರ್ಯಾಗೆ ಬಾಳ ಜನ ಪಿತೂರಿ ಮಾಡಾಕತ್ಯಾರ? ನೋಡು ಯೋಚ್ನೆ ಮಾಡು. ಹಿಲಾಲು ಬಾಬ್ತು ಕೈಬಿಟ್ಟೀತು? ಪಟೇಲ್ರು ಅನ್ಕೊಂಡ್ರೆ ಏನ್ ತಿಳ್ದೀ. ಧರ್ಮದರ್ಶಿ... ಅವ್ರು ಪಂಚ್ಯಾತಿಗೆ ಕೂತ್ರ ಹನ್ಮಪ್ಪನ ದಯ ಬರ್ತದ ಅವ್ರಗ. ಅವರ್ಜೋಡಿ ಹೊಂದುಕೊಂಡು ಹೋದ್ರೆ ಹನ್ಮಪ್ಪಗೆ ನೀನು ಹೊಂದ್ಕೊಂಡಂಗೆ ನೋಡವ. ಹೊಂದ್ಕಂಡ್ರಾ ಹಿಲಾಲು ಉಳಿತೈತಿ, ಮಗನಿಗೆ ಒಳ್ಳೆದು ಆಗತೈತಿ. ಹನ್ಮಪ್ಪಂಗೆ ನಿನ್ನ ಸೇವಾನು ಸೇರತೈತಿ. ನೋಡವ್ವ ಯೋಚ್ನೆ ಮಾಡು. ಪಟೇಲ್ರು ಕೇಳ್ತೀಲ್ಲ ಆ ದೇವ್ರೆ ಬಯಸ್ಯಾನ. ದೇವ್ರು ದೊಡ್ಡೋನು; ನಿನ್ನ ಬಯಸ್ಯಾನ' ಪಟೇಲಪ್ಪನ ಆಳು ಕಲ್ಲ ಸಾವಿತ್ರಿ ಎದೆಗೆ ಚಿಂತೆ ತುಂಬಿ ಎದ್ದು ಹೋಗಿದ್ದ.

* * *

ಶುಕ್ರವಾರ ಒತಾರೆ ಮನಿಗೊಂದಾಳು ಪಂಚಾಯಿತಿ ಸೇರಿತು. ಪಟೇಲಪ್ಪ 'ನೋಡ್ರಪ, ಸಣ್ಣೀರ ಹೋದ. ಹಿಲಾಲು ಹಿಡಿಯೊಕೆ ಅವ್ನ ಮಗನ ಗೊತ್ತು ಮಾಡಣ. ತಂದೆ ಇಲ್ಲದ ಮಗ. ಒಂದೀಟು ಒಳ್ಳೆದಾಗ್ಲಿ ಅಲವ್ರಾ?' ಅನ್ನೊ ಕಾಳಜಿ ಮಾತೇಳಿದಾಗ, ಜನ್ರೇ ಹೌದ್ದೌದು ಅನ್ನುವಂತೆ ಮಾಡಿ, ಪಂಚಾಯತಿ ಮುಗ್ಸಿದ್ದ. 'ಬಹಳ ದಿನ ಆತು. ನಾಳೇನೆ ಸಣ್ಣೀರನ ಮಗ ಬಸ್ಯಂಗೆ ಹಿಲಾಲು ಪೂಜೆ ಮಾಡುವ' ಅಂತೇಳಿ ಎದ್ದು ಹೋಗಿದ್ದ.

ಶನಿವಾರ ಬೆಳಗ್ಗೆ ಎದ್ದ ಸಾವಿತ್ರಿ ಮಗನಿಗೆ ಸ್ನಾನ ಮಾಡಿಸಿ, ಚೆಂದದ ಹೊಸ ಬಟ್ಟೆ ತೊಡಿಸಿ. ಗುಡಿ ಮುಂದಕ್ಕೆ ಜನರ ಜೊತೆ ಕಳ್ಸಿ ತಾನು ಮನೇಲಿ ಉಳಿದಳು. ಬಸ್ಯ 'ನೀನೂ ಬಾರವ್ವೊ...' ಅಂತ ಕರೆದಿದ್ದ. ಗಂಟಲಲ್ಲಿನ ದುಃಖ ನುಂಗಿ 'ನೀ ಹೋಗ್ ಬಸ್ಯ, ನಾ ಬಂತೀನಿ' ಅಂದು ಮಗ ಮರೆಯಾಗೊವರೆಗೂ ನಿಂತು ನೋಡಿದ್ದಳು. ಮಗ ಪಸಂದು ಇದ್ದ. ಬಸ್ಯ ಗುಡಿ ಮುಂದೆ ಬಂದು ನಿಂತ. ಹನುಮನ ಹಲಗೆ ಸದ್ದು ಜೋರಿತ್ತು. ಊರಿನ ಜನ ಅಗಸಿ ಮುಂದೆ ಸೇರಿ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು. ಭಯ ಭಕ್ತಿಯಿಂದ ಜನ ಅತ್ತ ಕಡೆಯೇ ನೋಡತೊಡಗಿದ್ದರು. ಪೂಜಾರಪ್ಪ ಒಕುಳಿ ತಂದು ಬಸ್ಯನ ಮೇಲೆ ಸುರಿದ. ಬಸ್ಯ ಸಣ್ಣಗೆ ನಡುಗಿದ. ಅವನನ್ನು ಅಲ್ಲಿಂದ ತಂಗ್ಯಾಮನ ಗುಡಿಗೆ ಕರೆದುಕೊಂಡು ಹೋಗಿ ಸಣ್ಣೀರ ಮಾಡಿಟ್ಟಿದ್ದ ಹಿಲಾಲೊಂದನ್ನು ಕೊಟ್ಟು ಅದನ್ನ ಹೊತ್ತಿಸು ಅಂತ ಹೇಳಿದರು. ಬಸ್ಯ ಹಿಲಾಲು ಹೊತ್ತಿಸಿದ. ಅದನ್ನು ಹಿಡಿದು ಗುಡಿ ಮುಂದೆ ಬಂದು ನಿಂತ. ನಾಕು ತಿಂಗಳಿನಿಂದ ಹಿಲಾಲು ಇಲ್ಲದೆ ಒಳಗೆ ಇದ್ದ ಹೊಂಡದೇವ್ರು ಹನ್ಮಪ್ಪ ಬೂದಿಬಸಪ್ಪನ ತಲೆಯೇರಿ ಬಂತು. ಕರೆಕಲ್ಲು ಕಡೆ ಮೆರವಣಿಗೆ ಹೊರಟಿತು. ಊರಿನ ಜನರೆಲ್ಲಾ ದೇವರನ್ನು ಹಿಂಬಾಲಿಸಿತು. ಸಾವಿತ್ರಿ ಮನೆಯಲ್ಲೆ ಕೂತು ಒತ್ತಿ ಬರ್ತಿದ್ದ ಕಣ್ಣೀರು ಒರೆಸಿಕೊಳ್ತಿದ್ದಳು. ಮರದ ದೊಡ್ಡ ಕುರ್ಚಿಯ ಮೇಲೆ ಕೂತಿದ್ದ ಪಟೇಲಪ್ಪ ಮಿಷ್ನಿನ ಮನೇಲಿ ಸಾವಿತ್ರಿ ಜತೆ ಹಂದಾಡಿದ್ದನ್ನು ನೆನೆಸಿಕೊಂಡು ಮೀಸೆ ಮೇಲೆ ಕೈಯಾಡಿಸಿಕೊಳ್ತಾ ಮುಗುಳು ನಗುತ್ತಿದ್ದ.

ಊರಿನ ಎಲ್ಲರೂ ಅಗಸಿ ಮುಂದೆಯೇ ಇದ್ದರು. ಪಟೇಲರ ಹೆಂಡತಿ ಕಮಲಿಯು, 'ನನಗೆ ತಲೆನೋವು, ನೀವು ಹೋಗಿ' ಎಂದು ಗಂಡನಿಗೆ ಹೇಳಿ ತಾನು ಮನೆಯಲ್ಲೇ ಉಳಿದಿದ್ದಳು. ಹಲಗೆ ಹನುಮ ಹೊಂಡದೇವ್ರ ಮುಂದೆ ಝಣಝಣನೆ ಹಲಗೆ ಬಾರಿಸುತ್ತಿದ್ದ. ಅತ್ತ ಅಗಸಿಯಲ್ಲಿ ದೇವ್ರ ಸಂಭ್ರಮ ಅರಳುವಾಗ ಇತ್ತ ಪಟೇಲರ ಹೆಂಡತಿ ಕಮಲಿ ಹೊರಗೆ ಕಾದು ನಿಂತಿದ್ದ ಮಾದ್ರ ಪರಮೇಶಿಯನ್ನು ಕರೆದುಕೊಂಡು ಬಾಗಿಲಿಕ್ಕಿಕೊಂಡು ಅವನ ಮುಂದೆ ಪೂರ್ತಿ ಬೆತ್ತಲಾದಳು.

ಹಲಗೆಯ ಸದ್ದು, ಪಟೇಲರ ನಗು, ಉರಿಯುವ ಹಿಲಾಲು ಮತ್ತು ಪಟೇಲರ ಹೆಂಡತಿ ಕಮಲಿಯ ಬೆತ್ತಲೆ ದೇಹದ ಮೇಲೆ ಪರಮೇಶಿಯ ಕೈಗಳ ಓಡಾಟ, ಅಲ್ಲಿ ಮರುಕು ಮನೆಯಲ್ಲಿ ಸಾವಿತ್ರಿ ಸುರಿಸುತ್ತಿದ್ದ ಕಣ್ಣೀರು ಯಾವುದೂ ಒಂದು ಎಳೆಯಲ್ಲಿ ಸೇರತೊಡಗಿದ್ದವು.

●